







ಮನೆಯಲ್ಲಿ ಮೊಬೈಲ್ ನೆಟ್‌ವರ್ಕ್ ಸಿಗುವುದಿಲ್ಲ, ಹೀಗಾಗಿ ಫೋನ್ ಮಾಡಲು ಮನೆ ಪಕ್ಕದ ಕಾಡಿನ ದಿಬ್ಬವೇರಿ ನಿಲ್ಲಬೇಕು. ಮಾತುಕತೆ ಶುರು–ವಾಗುವ ಹೊತ್ತಿಗೆ ಧ್ವನಿ ಆಲಿಸಿ ಕಾಡಿನ ಕಾಲುದಾರಿಯಲ್ಲಿ ಓಡಿ ಬಂದು ಗೌರಿ ಮೈ ನೆಕ್ಕಲು ಶುರು ಮಾಡುತ್ತಾಳೆ. ನಮ್ಮ ಗಮನ ತನ್ನೆಡೆ ಸೆಳೆಯುವ ಒಲ್ಲೈಕೆ ತಂತ್ರವದು.  ಹೆಚ್ಚು ಹೊತ್ತು ಮೊಬೈಲ್‌ನಲ್ಲಿ ಮಾತಾಡುತ್ತ ನಿಂತರೆ ಅವಳ ಸಹನೆ ಮೀರುತ್ತದೆ, ಕೈ ಕಚ್ಚಲು ಆರಂಭಿಸುತ್ತಾಳೆ. ತಲೆ ತಿಕ್ಕುತ್ತ, ಕುತ್ತಿಗೆಯಲ್ಲಿ ಕೈಯಾಡಿಸುತ್ತ, ಕಿವಿ ಸಂಧಿಯ ನೊಣ ಓಡಿಸುವ, ಉಣುಗು ತೆಗೆಯುವ ನಾಟಕ ಮಾಡುತ್ತ ಸಂಭಾಳಿಸಬೇಕು. ಮನೆಯತ್ತ ಹೆಜ್ಜೆಯಿಡಲು ಅಣಿಯಾಗುವಷ್ಟರಲ್ಲಿ ಅಂಗಳದ ಕಟ್ಟೆಗೆ ಸರಸರ ನಮಗಿಂತ ಮುಂಚೆ ಓಡಿ ಯಜಮಾನ್ತಿಯಂತೆ ನಿಲ್ಲುವ ಗೈರತ್ತು. ಬಾಳೆಹಣ್ಣು, ಸಿಹಿತಿಂಡಿ, ದೋಸೆ.. ತಕ್ಷಣ ಸಮರ್ಪಿಸಬೇಕು. ಒಬ್ಬರ ಕೈತುತ್ತು ತಿಂದರೆ ಮುಗಿಯುವುದಿಲ್ಲ, ಮನೆಯಲ್ಲಿರುವ ಎಲ್ಲರೂ ಒಬ್ಬೊಬ್ಬರಾಗಿ ಹೊರಬಂದು ಪಾಲು ನೀಡುವ–ವರೆಗೆ ಕಟ್ಟೆಗೆ ಕಾಲಿಟ್ಟು ನಿರೀಕ್ಷಿಸುತ್ತ ನಿಲ್ಲುತ್ತಾಳೆ. ಮುಖ ನೋಡಿದ ಯಾರಿಗೂ ಮಾತಾಡಿಸದೇ ಮುಂದೆ ಹೋಗಲಾಗುವುದಿಲ್ಲ.

## ಯಾರೆಲ್ಲ ಬಂದಿದ್ದೀರಿ?

ಮಲೆನಾಡಿನ ನಮ್ಮಲ್ಲಿ ಅಲ್ಲೊಂದು ಇಲ್ಲೊಂದು ಮನೆಗಳು. ಹಿಂದೆಲ್ಲ ಹಬ್ಬದ ಮರುದಿನ ಭಿಕ್ಷುಕರು ಕಾಡು ಹಳ್ಳಿ ಹುಡುಕಿ ಬರುತ್ತಿದ್ದರು. ಒಬ್ಬರ ನಂತರ ಮತ್ತೊಬ್ಬರು ಸಾಲುಗಟ್ಟಿ ಹಾಜರಾಗುತ್ತಿದ್ದರು.

ಗೌರಿಯ ಕತೆಯೂ ಅಷ್ಟೇ, ತಕ್ಷಣ ಕಾಣಿಸುವವಳು ಒಬ್ಬಳು. ನಂತರ ಮಕ್ಕಳು, ಮರಿಮಕ್ಕಳು, ಕಾಡಿನ ಬಳಗವನ್ನೆಲ್ಲ ಸಾಲು ಹಚ್ಚಿ ಶಾಲಾ ಮಕ್ಕಳಂತೆ ಅಂಗಳದಲ್ಲಿ ನಿಲ್ಲಿಸುತ್ತಿದ್ದಳು. ಯಾವ ಜನ್ಮದ ಋಣಾನು–ಬಂಧವೋ ಅಂತ ಇದ್ದುದರಲ್ಲಿ ಎಲ್ಲರಿಗೂ ಹಂಚಿ ಸಮಾಧಾನ ಪಡಿಸಲು ಸುಸ್ತಾಗಬೇಕಿತ್ತು. ದೊಡ್ಡವುಗಳ ಹೊಡೆದಾಟದಲ್ಲಿ ಚಿಕ್ಕವುಗಳಿಗೆ ಏನೂ ಸಿಗುತ್ತಿರಲಿಲ್ಲ, ಮರಿಗಳಿಗಷ್ಟೇ ನೀಡಲು ಸುತಾರಾಂ ಸಾಧ್ಯವಿಲ್ಲ, ಆಗ ಗೌರಿ ರೌಡಿಯಾಗಿ ಅವತರಿಸಿ ಕಸಿದು ತಿನ್ನುತ್ತಿದ್ದಳು.